Regd NoM 1299 34 ನೇ ವರ್ಷ ತಾ|| 9—10—50

ಸತ್ಯವಾದಿ
SATYAVADI

ಸಂಪಾದಕರು: ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು ‖ ಬಿಡಿ ಪ್ರತಿ 3 ಪೈ

ಬೆಂಗಳೂರು: ವೈಸೂರು ಮುಖ್ಯ ಮಂತ್ರಿಗಳ ಅಸ್ವಾಂ ಪರಿಹಾರ ನಿಧಿಗೆ ರೂ 104587 ಬಂದಿದೆ.

ಬೆಂಗಳೂರು: ವಿಮಾನ ಕಾರ್ಖಾನೆ ಕಾರ್ಮಿಕರು ಇಂದಿನಿಂದ ಉದ್ಯೋಗಕ್ಕೆ ಹಾಜರಾಗುವ ತೀರ್ಮಾನಕ್ಕೆ ಬಂದಿದೆ.

ನಿರಾಕರಣೆ: ಭಾರತ ಕೊರಿಯ ಸಮಿತಿ ಸದಸ್ಯತ್ವ ನಿರಾಕರಣೆ ಮಾಡಿದೆ.

ವೈಸೂರು ಧ್ವಜದಲ್ಲಿ ಬದಲಾವಣೆಯಾಗಿರುವುದು ಮಹಾಪ್ರಭುಗಳ ಒಪ್ಪಿಗೆ ಪಡೆದ ಬಗ್ಗೆ ಗೆಜಿಟ್‌ನ ವಿಶೇಷಪ್ರಕಟಣೆ ಹೊಂಟಿದೆ

ಅಪೇರಾ— ಯಶಸ್ವಿ 3 ನೇ ವಾರ

ದಿಗಂಬರ ಸಾಮಿಯಾರ್

ನಂಬಿಯಾರ್, ದ್ರೌಪದಿ, ಕುಮಾರಿ ಕಮಲ, ಜಾಲಸೆಬ್ರಹ್ಮಣ್ಯಂ, ಲಲಿತ, ಪದ್ಮಿನಿ ಅಭಿನಯಿಸಿರುವ ಮನೋನ್ನತ ತಮಿಳು ಚಿತ್ರ

ಪ್ರತಿ ದಿವಸ 3 ಆಟಗಳು

ವುಡ್ ಲ್ಯಾಂಡ್ಸ್ ಜನಭರಿತ 2 ನೇ ವಾರ

ಏಸ, ಜ್ಯೋತಿಲಾಲ್, ಕುಲದೀಪ್, ಮಜ್ನು, ಜೊಹರ್, ಶಕುಂತಲಾದೇವಿ ಪಂಚಮ, ಹಾಸ್ಯನಯ ಅಭಿನಯದಿಂದ ಕೂಡಿದ ಚಿತ್ತಾಕರ್ಷಕ ಹಿಂದಿ ಚಿತ್ರ

ಏಕ್ ಥಿ ಲಡ್ಕಿ

Ek - Thi - Larki

ದಿನವಹಿ 3 ಆಟಗಳು

ಮೈಸೂರು ರಣಜಿತ್ ಟಾಕೀಸಿನಲ್ಲಿ

6-10-50 ರಿಂದ .... ದಿನ 3 ಆಟಗಳು

ನೃತ್ಯ — ಸಂಗೀತ — ಹಾಡುಗಳು — ಯಂತ್ರವಿಪುಣತೆಯಿಂದ ಕೂಡಿದ ಅಮೋಘ ಚಿತ್ರ

ಆಧಿರಾತ್ (ಹಿಂದಿ) ADHI RAAT

ನರ್ಗಿಸ್ — ಅಶೋಕ್ ಕುಮಾರ್ ಪ್ರಥಮ ಮಿಲನ

6-10-50 ರಿಂದ ಅಮೋಘ ಪ್ರಾರಂಭ

ಮೈಸೂರು ಪ್ರಭಾ ಪಿಕ್ಚರ್ ಹೌಸ್‌ನಲ್ಲಿ

ಸೊಹ್ರಾಬ್ ಮೋದಿಯವರ ಅತ್ಯದ್ಭುತ ಹಿಂದಿ ಸಾಮಾಜಿಕ ಚಿತ್ರ

ಶೀಷ್ ಮಹಲ್

ಪಾತ್ರ: ನಾಸೀಂ, ಪುಷ್ಪಹನ್ಸ್, ನಿಗಾರ್, ಸೊಹ್ರಾಬ್ ಮೋದಿ

ಬೆಂಗಳೂರು ಪ್ರಭಾತದಲ್ಲಿ ಕಿಕ್ಕಿರಿದ ಮಂದಿಗೆ ಚಿತ್ರ ನಡಿಯುತ್ತಿದೆ

ಮಂಗಳೂರು ರೂಪವಾಣಿಯಲ್ಲಿ ಶೀಘ್ರದಲ್ಲೇ ಪ್ರದರ್ಶನ

— A RAJSHRI Release

ಉತ್ತರ ಕೊರಿಯದಲ್ಲಿ ಮುನ್ನಗಲು

ಮೆಕಾರ್ಥರ್‌ಗೆ ವಿಶ್ವಸಂಸ್ಥೆ ಸೂಚನೆ

ಕಳೆದ ತಿಂಗಳು 15 ನೇ ತಾ|| ತೀರುವ ಹದಿನೈದು ದಿನಗಳ ರೆಗ್ಯುಲೇಟೆಡ್ ಮಾರ್ಕೆಟ್ ಪ್ರಗತಿ ಕಂಡಿತು ಜೆಂಗಳೂರಿನಿಂದ ಪ್ರಭುತ್ವ ಪ್ರಕಟಣೆ ಹೊರಬಿದ್ದಿದೆ

ಸೌರಾಷ್ಟ್ರ ವಿಧಿಮಂಡಲ 5 ವರ್ಷಗಳ ಖಾದಿ ಯೋಜನೆಗಾಗಿ ರೂ. ಅರ್ಧ ಲಕ್ಷ ವಿನಿಯೋಗಿಸಿದೆ ಎಂದು ಸೌರಾಷ್ಟ್ರ ವಾರ್ತೆ.

ಭಾರತಕ್ಕೆ ಸಿಲೋನಿನಿಂದ 5 ಸಹಸ್ರ ಟನ್ ಅಕ್ಕಿ ಬಂದಿದೆ

ಸ್ವತಂತ್ರ ಕಾಶ್ಮೀರದಲ್ಲಿ ಪ್ರಜಾಪ್ರಭುತ್ವದ ಕೊಲೆ – ಎಂಬ ಪ್ರಕಟನೆಯನ್ನು ಕಾಶ್ಮೀರ ಮುಸ್ಲಿಂ ಪರಿಷತ್ತು ಪ್ರಕಟಿಸಿ ಅಲ್ಲಿನ ಘೋರ ಕೃತ್ಯಗಳನ್ನು ಬಹಿರಂಗಪಡಿಸಿದೆ.

ಜೊಂಬಾಯಿ ಒಟ್ಟೆ ಗಿರಣಿಗಳ ಮುಷ್ಕರ ಸಂಧಾರಿಸಿದೆ

ಕಾಶ್ಮೀರವನ್ನು ಬ್ರಿಟಿಷ್ ಧರ್ಮದರ್ಶಿತ್ವದಲ್ಲಿ ಇಡಬೇಕೆಂಬ ಸೂಚನೆಯನ್ನು ಕ್ರಿಸ್ಟಾಫರ್ ಬಡ್ಡಿವುಡ್ ಎಂಬುವ ಟೈಮ್ಸ್ ಪತ್ರಿಕೆಗೆ ಬರೆದಿರುವ ಪತ್ರದಲ್ಲಿ ತಿಳಿಸಿರುವುದಾಗಿ ಲಂಡನ್ ವರದಿ

ಅಂಗಿಯನ್ನು ಧರಿಸಿ ಸಂಸ್ಕೃತ ಕಾಲೇಜಿಗೆ ಹಾಜರಾಗಕೂಡದೆಂಬ ನಿಷೇಧ ಪ್ರತಿಭಟಿಸಿ ಖುಡುಪಿಯ ಸಂಸ್ಕೃತ ಕಾಲೇಜಿನ 48 ವಿದ್ಯಾರ್ಥಿಗಳು ಲೀವಿಂಗ್ ಸರ್ಟಿಫಿಕೇಟ್ ಅಪೇಕ್ಷಿಸಿದ್ದಾರೆ.

ಅಕ್ರಮ ದಾಸ್ತಾನುಗಾರರು, ಕಳ್ಳ ಪೇಟೆಗರು ಇವರ ಮೇಲೆ ತೀವ್ರ ಕ್ರಮ ಕೈಗೊಳ್ಳಲು ಬೊಂಬಾಯಿ ಸರ್ಕಾರ ನಿರ್ಧರಿಸಿದೆ. ಅವರನ್ನು ರಸ್ತೆಗಳಲ್ಲಿ ಸಡೆಸಿ ಕರೆದೊಯ್ಯುವುದು ಇದರಲ್ಲಿ ಸೇರಿವೆ

ಮೈಸೂರು ಸಂಸ್ಥಾನದಲ್ಲಿ ಆಹಾರ ಉತ್ಪತ್ತಿ ಅಧಿಕಿಸಲು ಸಚಿವ ಶ್ರೀ ಟಿ. ನರಿಯಪ್ಪನವರ ಮುಂದಾಳುತನದಲ್ಲಿ 3 ಕೋಟಿ ರೂ. ಯೋಜನೆ ಸಿದ್ಧವಾಗಿರುವುದು ಎಂದು ಬೆಂಗಳೂರು ವಾರ್ತೆ. ರೂ. ಗಳನ್ನು ಭಾರತ ಸರ್ಕಾರ ಕೊಡಲಿದೆ.

ಭಾರತ ಸರ್ಕಾರ ಸಕ್ಕರೆ-ಬೆಲ್ಲ ನಿಯಂತ್ರಣ ಜಾರಿಗೆ ತಂದಿರುವುದಾಗಿ ದೆಹಲಿ ವಾರ್ತೆ.

ಅಕ್ರಮ ಬಟ್ಟೆ ದಾಸ್ತಾನು

ಬೀಹಾರಿನಲ್ಲಿ ನಡೆದ ಬಟ್ಟೆ ಅಂಗಡಿಗಳ ಶೋಧನೆಯಿಂದ ಅಕ್ರಮವಾಗಿ ದಾಸ್ತಾನು ಮಾಡಿದ್ದ 1 ಲಕ್ಷ ಗಜ ಬಟ್ಟೆ ಮತ್ತು 21 ಸಾವಿರ ಜೊತೆ ಸಂಚೆ ಬಟ್ಟೆ ಸೀರೆ ಪತ್ತೆಯಾಗಿವೆ

ಅಮೇರಿಕಾ ಪಡೆಯು 38 ಅಕ್ಷಾಂಶ ರೇಖೆಯ ದಾಟಿ ಉತ್ತರ ಕೊರಿಯಾ ಪ್ರವೇಶಿಸುವೊಂದಿಗೆ ಮೇಲೆ ಧಾಳಿ ಪ್ರಾರಂಭವಾದೆ.

ಕೊರಿಯಾ ಯುದ್ಧದಲ್ಲಿ ರಷ್ಯವು ಭಾಗವಹಿಸಿಲ್ಲವೆಂದು ಅಮೆರಿಕಾ ಗೂಢಚಾರರ ಅಭಿಪ್ರಾಯ.

ಮಧುಗಿರಿ— ಲೈಸೆನ್ಸಿಲ್ಲದೆ ಸೀಮೆ ಎಣ್ಣೆ ಮಾರುತ್ತಿದ್ದ ಬಲರಂಗಪ್ಪ ಶೆಟ್ಟಿಯವರಲ್ಲಿದ್ದ 23 ಟಿನ್ ಸೀಮೆ ಎಣ್ಣೆ ಪತ್ತೆಹಚ್ಚಲ್ಪಟ್ಟು ಅವರ ಮೇಲೆ ಮೊಖದ್ದಮೆ ಹೂಡಲಾಗಿದೆ

ಇನ್ನು ಅರ್ಧ ವರ್ಷದಲ್ಲಿ ಕನ್ನಡ ಟೈಪ್‌ರೈಟರ್ ಒರುವ ಆಶ್ವಾಸನೆಯನ್ನು ಶ್ರೀ ಟಿ. ಶರ್ಮರವರು ಹುಬ್ಬಳ್ಳಿಯಲ್ಲಿ ಕೊಟ್ಟಿದ್ದಾರೆ

ಮೊನ್ನೆ ಹೈದರಾಬಾದಿನಲ್ಲಿ ಸರ್ದಾರ್ ಪಟೇಲರು ಮಾಡಿದ ಭಾಷಣದಲ್ಲಿ ಸಮಾಜ ವಿಘಾತಕ ಶಕ್ತಿಗಳನ್ನು ನಾಶ ಮಾಡಲು ಭಾರತ ರಾಷ್ಟ್ರ ನಿಶ್ಚಯ ಮಾಡಿದೆ ಎಂದರು.

ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘದ ಮೊನ್ನೆಯ ಸಭೆಯಲ್ಲಿ ಒಂಧನದಲ್ಲಿರುವ ಬೆಂಗಳೂರು ಪತ್ರಿಕೋದ್ಯೋಗಿಗಳ ಬಿಡುಗಡೆ ಕೇಳಲಾಯಿತು

ಪಾಕೇಸ್ತಾನದಲ್ಲಿ ಅಸ್ಪೃಶ್ಯತೆ ನಿವಾರಣೆಯ ನಿರ್ಣಯವನ್ನು ಅಲ್ಲಿನ ಘಟನಾ ಮಂಡಲಿ ಅಂಗೀಕರಿಸಿತು

ಪಾಕಿಸ್ತಾನಿ ನಿರಾಶ್ರಿತರು ಬೊಂಬಾಯಿ ನಗರವೊಂದರಲ್ಲಿಯೇ 60 ಸಹಸ್ರ ಸಂಖ್ಯೆ ರೇಷ್ಟ್ ಕಾರ್ಡುಗಳಿವೆ.

ಪ್ರಧಾನ ನ್ಯಾಯಾಧಿಪತಿಗಳಾದ ಶ್ರೀ ಪಿ. ಮೇದಪ್ಪನವರು ದೀರ್ಘ ರಜಾ ತೆಗೆದುಕೊಳ್ಳುವ ವಾರ್ತೆ ಬೆಂಗಳೂರಿನಿಂದ ಬಂದಿದೆ

ಕನ್ನಂಬಾಡಿ ಕಟ್ಟೆ ವಿಚಾರಣಾ ಸಮಿತಿ ಕಾರ್ಯಕಲಾಪಗಳು ತೀರುತ್ತಾ ಬಂದಿದೆಯೆಂದು ಗೊತ್ತಾಗಿದೆ.

ಷಡ್ಯಂತ್ರ ಯೋಗ

ಕನ್ಯಾಕುಮಾರಿಯಲ್ಲಿ ನಾಳೆ ನಾಡಿದ್ದು ಷಡ್ಯಂತ್ರ ಯೋಗ ವಿಭಾಯುಷ್ಟೆ. ಇದರಿಂದ ಏನೊಂದು ಅನರ್ಥವಾಗುವುದಿಲ್ಲವೆಂದೂ, ಆದರೆ ರಾಷ್ಟ್ರೀಯ ಸಂಸ್ಥೆ ಪ್ರತಿಷ್ಠೆಗಳ ನಡುವೆ ದೇಶದ ಬಡ ಜನರು ಸಿಕ್ಕಿಕೊಂಡು ನಲುಗುವ ಲಕ್ಷಣವಿದೆಯೆಂದು ಓರ್ವರ ಅಭಿಪ್ರಾಯವು

ಸಂಪುಟ ೯ ಸಂಚಿಕೆ ೪ ॥ ಶ್ರೀ ॥ ತಾ॥ 9-10-1950

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳಬಾಗಿಲು,
ಶ್ರೀ ಕೃಷ್ಣಾನಂದ ಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟಣಮಾಲೆ —
ಸಂಪಾದಕ : ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

॥ ಶ್ರೀಹರಿ ॥

ಅಖಿಲ ಭಾರತೀಯ ರಾಮರಾಜ್ಯ ಪರಿಷತ್ತಿನ

ಘೋ ಷ ಣೆ

ಭಾರತದ ಎಲ್ಲಾ ದುಃಖಗಳಿಗೆ ಚಿಕಿತ್ಸೆಯು, ಉನ್ನತಿಯು
ಹಾಗೂ ಸಮೃದ್ಧಿಯು ಏಕಮಾತ್ರ ಉಪಾಯವೆಂದರೆ

— ರಾ ಮ ರಾ ಜ್ಯ —

ಅಖಿಲ ಭಾರತೀಯ ರಾಮರಾಜ್ಯ ಪರಿಷತ್ತಿನ
— ದ್ವಿತೀಯ ವಾರ್ಷಿಕ ದೆಲ್ಲಿಯ ಮಹಾಧಿವೇಶನದ ಮುಖ್ಯ ಪ್ರಸ್ತಾವ —

[ಮುಂದುವರಿದುದು]

೧೪ ಶಾಸನದಲ್ಲಿ ಅದರ ಅಧುನಿಕ ದೋಷಗಳಿಂದ ಮುಕ್ತವಾಗಿರುವಂತಹ ನಿರ್ವಾಚನ ಪದ್ಧತಿಯನ್ನು ಪ್ರಚಲಿತಗೊಳಿಸುವುದು. ಗ್ರಾಮಗಳನ್ನು ಶಾಸನಕ್ಕೆ ಆಧಾರವಾಗಿ ನಿರ್ಣಾಯಕಗೊಳ್ಳುವುದು. ಅವುಗಳಲ್ಲಿ ಬಂಧುತ್ವದ ಪ್ರಾಚೀನ ಮಹತ್ತ್ವವನ್ನು ಜಾಗರಿತಗೊಳಿಸುವುದು. ಪಂಚಾಯತಗಳನ್ನು ಹಿಂದಿನ ರೀತಿಯಲ್ಲಿ ಸಂಘಟಿತಗೊಳಿಸುವುದು. ರಾಜ್ಯದ ಜನಮತಕ್ಕೆ ಅನುಕೂಲವಾಗಿ ಮಾತ್ರ ಜನತೆಯಲ್ಲಿಯೂ ರಾಜ್ಯದಲ್ಲಿಯೂ ಒಮ್ಮತವನ್ನುಂಟುಮಾಡುವುದು.

೧೫ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡುವುದು. ಆದರೆ ಜತೆಗೇ ಪ್ರಾಂತೀಯ ಹಾಗೂ ವರ್ಗಗಳ ಭಾಷೆಗಳ ರಕ್ಷಣೆಯನ್ನೂ ಉನ್ನತಿಯನ್ನೂ ಮಾಡುವುದಲ್ಲದೆ ಪ್ರಾಚೀನ ಭಾಷೆಗಳ ಪಠನ-ಪಾಠನವನ್ನು ಅಧಿಕ ಪ್ರಚಾರ ಮಾಡುವುದು.

೧೬ ಪ್ರಾಚೀನ ಭಾರತೀಯ ಕಲೆಗಳನ್ನೂ, ವಿದ್ಯೆಗಳನ್ನೂ, ವಿಜ್ಞಾನವನ್ನೂ ಉದ್ಧಾರವಾಡುವುದು. ದೇಶೀ ಚಿಕಿತ್ಸಾ ಪದ್ಧತಿಯ ಸಂರಕ್ಷಣೆಯನ್ನೂ ಪ್ರಚಾರವನ್ನೂ ಉನ್ನತಿಯನ್ನೂ ಮಾಡುವುದು.

೧೭ ಮಾತೃಶಕ್ತಿಯ ಗೌರವನನ್ನು ಜಾಗರೂತಗೊಳಿಸುವುದು.

೧೮ ಎಲ್ಲಾ ವರ್ಗಗಳ ಧಾರ್ಮಿಕ ವಿಶ್ವಾಸಗಳನ್ನು ರಕ್ಷಿಸುವುದು ತಮ್ಮ ಧರ್ಮಕ್ಕನುಸಾರವಾಗಿ ಜೀವನವನ್ನು ಕಳೆಯಲು ಎಲ್ಲರಿಗೂ ಸ್ವಾತಂತ್ರ್ಯ ವೀಯುವುದು. ಯಾರೊಬ್ಬರ ಧರ್ಮದಲ್ಲಿಯಾಗಲಿ ಯಾವುದೊಂದು ಸರ್ಕಾರೀ ಹಸ್ತಕ್ಷೇಪವನ್ನೂ ತಡೆಯುವುದು. ಎಲ್ಲಾ ಸಂಪ್ರದಾಯಗಳ ತೀರ್ಥಸ್ಥಾನಗಳನ್ನೂ, ದೇವಸ್ಥಾನಗಳನ್ನೂ, ಉಪಾಸನಾ ಗೃಹಗಳನ್ನು, ಧಾರ್ಮಿಕ ಸಂಸ್ಥೆಗಳನ್ನೂ ರಕ್ಷಿಸುವುದು, ತತ್ಸಂಪ್ರದಾಯಗಳ ಅಪಹೃತವಾದ ಧರ್ಮಸ್ಥಾನಗಳನ್ನು ಸಸನ್ಮಾನವಾಗಿ ಪರಿವರ್ತನೆಮಾಡಿಸಿ ಪರಸ್ಪರ ಸದ್ಭಾವನೆಗಳನ್ನು ದೃಢಗೊಳಿಸುವುದು.

೧೯ ತದ್ಧರ್ಮಿಗಳ ಹಾಗೂ ಸಂಸ್ಥೆಗಳ ತತ್ಸಂಪ್ರದಾಯಗಳ ಧರ್ಮಗ್ರಂಥಗಳಿಂದಲೂ ಸಂಪ್ರದಾಯಾಚಾರ್ಯರುಗಳಿಂದಲೂ ಮಾಡಲ್ಪಟ್ಟ ವ್ಯಾಖ್ಯೆಗೇ ಪ್ರಾಮಾನ್ಯತೆ ಕೊಡುವುದು.

ಭೂಮಿಯು ಚಪ್ಪಟೆಯಾಗಿದೆಯೆ ?

ಟು

(' ಸನಾತನ ' ದಿಂದ)

ಭೂಮಿಯು ಗೋಳಾಕಾರದ ವಿಷಯದಲ್ಲಿ ನಾವು ಎಷ್ಟು ಸಂಚಿತರಾಗಿರುವೆವೆಂದರೆ ಇದಕ್ಕೆ ವಿರುದ್ಧವಾದ ಯಾವುದೇ ಸಿದ್ಧಾಂತವನ್ನು ನಾವು ಪಕ್ಕನೆ ನಂಬಿಗೆಯಿಡಲಾರದವಾಗಿಬಿಟ್ಟಿರುವೆವು. ಭೂಮಿಯು ಚಪ್ಪಟೆಯಾಕಾರವುಳ್ಳದೆಂಬೀ ಅರ್ವಾಚೀನ ಸಿದ್ಧಾಂತವು ನಿಜವಾಗಿ ಆಶ್ಚರ್ಯಜನಕವಾಗಿದೆ. ಮುಂದೊಂದು ದಿನ ಭೂಮಿಗೆ ತಟ್ಟೆಯ ಆಕಾರವನ್ನಿತ್ತು ಅದು ಸ್ಥಿರಪಡುವುದೆಂದು ತಿಳಿಯಲ್ಪಡುವುದೋ ಏನೋ ಹೇಳಲಾಗದು. ಜೆ. ಮೆಕ್ಕೊನೆಲ್ಡ್ ಎಂಬ ಅಮೇರಿಕನ್ ವೈಜ್ಞಾನಿಕನು ತನ್ನದೊಂದು ಲೇಖನದಲ್ಲಿ ಅನೇಕ ಪ್ರಮಾಣಗಳನ್ನು ಕೊಟ್ಟು ಭೂಮಿಯು ತಿತ್ತಳೆಯಂತೆ ದುಂಡಗಿದೆಯೆಂದು ಸಿದ್ಧಪಡಿಸಿರುವನು. ಆದರೆ ಈ ಕಥನವು ಅಸಂಬದ್ಧವೂ ಸತ್ಯವಸ್ತುಲ್ಲಗಳೆಯುವುದೂ ಆಗಿದೆ. ಭೂಮಿಯನ್ನು ಇತರ ಗ್ರಹಗಳಂತೆ ಗ್ರಹವೆಂದೆಣಿಸುವುದಾದರೆ ನಿಶ್ಚಯವಾಗಿಯೂ ಯಾವ ಸಿದ್ಧಾಂತಗಳು ಬೇರೆ ನಕ್ಷತ್ರಗಳ ಹಾಗೂ ಗ್ರಹಗಳ ಅಧ್ಯಯನದಿಂದ ಸ್ವೀಕರಿಸಲ್ಪಟ್ಟಿವೆಯೋ ಅವು ಸಮ್ಮ ಭೂಮಿಗೂ ಅನ್ವಯಿಸುವುವು. ಈ ಅನ್ವೇಷಣೆಯು ವೈಜ್ಞಾನಿಕ ಜಗತ್ತಿನಲ್ಲಿ ಕೋಲಾಹಲವನ್ನೆಬ್ಬಿಸುವುದೆಂಬುದರಲ್ಲಿ ಸಂದೇಹವಿಲ್ಲ. ಯಾವ ಆಧಾರಗಳ ಮೇಲೆ ಇದನ್ನು ಸ್ಥಾಪಿಸಲಾಗಿದೆಯೋ ಅವೆಲ್ಲವೂ ಅಕಾಟ್ಯಗಳೂ ಪ್ರತ್ಯಕ್ಷವಾಗಿಯೂ ಇವೆ. ಓದುಗರ ಮನೋರಂಜನೆಗಾಗಿ ಕೆಲವು ಆರಿಸಿದ ಪ್ರಮಾಣಗಳು ಕೆಳಗೆ ಕೊಡಲಾಗಿವೆ.

ಚಂದ್ರನ ಮತ್ತು ಅನ್ಯ ಗ್ರಹಗಳ ಒಂದೇ ಮುಖವು ಸದೈವ ಪೃಥ್ವಿಯ ಕಡೆಗೆ ಇರುತ್ತದೆಂಬುದನ್ನು ಪ್ರತಿಯೊಬ್ಬ ಆಧುನಿಕ ವೈಜ್ಞಾನಿಕನೂ ಒಪ್ಪುತ್ತಾನೆ. ಒಂದು ವೇಳೆ ಆ ಗ್ರಹಗಳು ಚಲಿಸುತಿದ್ದು ತಮ್ಮ ಅಚ್ಚಿನಲ್ಲಿ ಸುತ್ತುತ್ತಿರುವುದಾದರೆ, ನಿಶ್ಚಯವಾಗಿಯೂ ಪ್ರತಿಯೊಂದು ದಿವಸದಲ್ಲಿ ಅಥವಾ ಮಾಸದಲ್ಲಿ ಇಲ್ಲವೆ ಪ್ರತಿಯೊಂದು ವರ್ಷದಲ್ಲಿ ಅವುಗಳ ಬೇರೆ ಬೇರೆ ಭಾಗತಲಗಳು ಭೂಮಿಯ ಕಡೆಗಿರುತ್ತಿದ್ದುವು. ಆದ್ದರಿಂದ ಚಂದ್ರನೂ ಎಲ್ಲ ಗ್ರಹಗಳೂ ತಟ್ಟೆಯಂತಿದ್ದು ಅವುಗಳ ಅಂಚುಗಳು ಕೇಂದ್ರಕ್ಕಿಂತ ಸ್ವಲ್ಪ ಮೇಲಕ್ಕೆ ಎದ್ದುಕೊಂಡಿವೆಯೆಂದೂ ಸಿದ್ಧವಾಗಿದೆ. ನಿಜವಾಗಿ ಭೂಮಿಯೂ ಒಂದು ಗ್ರಹವಾಗಿದ್ದ ಅವಶ್ಯವಾಗಿ ಅದರ ಆಕಾರವು ಈ ಪ್ರಕಾರದ ತಟ್ಟೆಯ ಹಾಗಿರುವುದು.

ಒಂದು ವೇಳೆ ಭೂಮಿಯು ದುಂಡಾಗಿರುತ್ತಿದ್ದರೆ ಸನಾತನ ಹಿಮಶ್ರೇಣಿಗಳ ಎತ್ತರವು ಭೂಮಧ್ಯ ರೇಖೆಯ ದಕ್ಷಿಣದಲ್ಲಿ ಉತ್ತರದಲ್ಲಿದ್ದಷ್ಟೇ ಇರುತ್ತಿದ್ದಿತು. ದಕ್ಷಿಣೇ ಆಲ್ಪ್ಸ್‌ಕಾದಲ್ಲಿ ಸನಾತನ ಹಿಮಶ್ರೇಣಿಗಳ ಎತ್ತರವು ೧೫೦೦೦ ಅಡಿಗಳಿದ್ದು, ಉತ್ತರಕ್ಕೆ ಹೋದಂತೆ ಈ ಎತ್ತರವು ಕ್ರಮವಾಗಿ ಕಡಿಮೆಯಾಗುತ್ತಾ ಹೋಗುವುದು. ಎಷ್ಟೆಂದರೆ ' ಅಲಾಸ್ಕಾ ' ತಲಪುವಾಗ ಇದು ಕೇವಲ ೨೦೦೦ ಅಡಿಯೇ ಇರುತ್ತದೆ. ಹೆಚ್ಚು ಉತ್ತರಕ್ಕೆ ಹೋದಾಗ ಈ ಎತ್ತರವು ಸಮುದ್ರಕ್ಕಿಂತ ಬರಿಯ ೫೦೦ ಅಡಿಯೆಂದು ಅಳೆಯಲಾಗಿದೆ. [ಸಶೇಷ]

(ಖ) ' ಕ ' ಭಾಗದಲ್ಲಿ ವರ್ಣಿತವಾದ ಉದ್ದೇಶದ ಪೂರ್ತಿಗಾಗಿ ಆವಶ್ಯಕವೇನೆಂದರೆ ಎಲ್ಲಾ ಪ್ರಾಂತಗಳ ಸಂಚಾಲಕರೂ ಪರಿಷತ್ತಿನ ವಿಧಾನಾನುಸಾರವಾಗಿ ಗ್ರಾಮ, ನಗರ, ಮಂಡಲಾದಿ ಶಾಖೆಗಳನ್ನು ಶೀಘ್ರಾತಿಶೀಘ್ರವಾ ವ್ಯವಸ್ಥಿತ ರೂಪದಿಂದ ಸಂಘಟಿತಗೊಳಿಸಬೇಕಲ್ಲದೆ, ಅವುಗಳ ಸಂಬಂಧವನ್ನು, ಕೇಂದ್ರೀಯ ಕಾರ್ಯಾಲಯದೊಂದಿಗೆ ಜೋಡಿಸಬೇಕು ಹಾಗೂ ಕೇಂದ್ರದಿಂದ ಕೊಡಲಾದ ಆದೇಶಗಳನ್ನು ತಮ್ಮ ಕಾರ್ಯಕ್ಷೇತ್ರದ ಶಾಖೆಗಳ ಮೂಲಕ ಕಾರ್ಯಾನ್ವಿತಗೊಳಿಸುವಂತೆ ಮಾಡಬೇಕು.

ನಿಗವಃ ಬೋಧ ಘಾಟ್, ದೆಲ್ಲಿ, ೨೩-೪-೫೦.

ಸಂದಲತಾಲ ಶಾಸ್ತ್ರೀ, ಪ್ರಧಾನ ಸಂಚಾಲಕ.
ಭೀವನೇಶ್ವರ ಬ್ಯಾನರ್ಜೀ, ಪ್ರಧಾನ ಕಾರ್ಯದರ್ಶಿ.

Edited, Printed and Publishedby M. S. Krishna Rao. at the Satyavadi Press Chamrajpuram-Mysore

.... ರಾಷ್ಟ್ರದ ಪ್ರಗತಿ ....!

' ಸೀತಾಪತಿ '

ರಾಷ್ಟ್ರದ ಪ್ರಗತಿ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯನ್ನು ಆವಲಂಬಿಸಿದೆ. ಈ ವಿಷಯವನ್ನು ಅರಿತು ಪ್ರತಿಯೊಬ್ಬನೂ ಆಚರಿಸಿದರೆ ರಾಷ್ಟ್ರವು ಪ್ರಗತಿ ಹೊಂದುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಆದರೆ ನಮ್ಮಲ್ಲಿ ಈ ಭಾವನೆ ಸಾಕಷ್ಟು ಬೆಳೆದುಬಂದಿಲ್ಲದಿರುವುದೇ ಇಂದಿನ ಶೋಚನೀಯ ಸ್ಥಿತಿಗೆ ಕಾರಣವಾಗಿದೆ ನಮ್ಮಲ್ಲಿ, ಪ್ರತಿಯೊಂದನ್ನು ಸರಕಾರ ಮಾಡಬಲ್ಲುದು, ಮೇಲಿನವರು ಮಾಡಲಿ, ನಾವು ಮಾಡಿದರಾಯಿತು ಎಂಬ ಭಾವನೆ ಬೆಳೆದುಬಂದಿದೆ. ಈ ಭಾವನೆ ಮೊದಲು ಮಾಯವಾಗಬೇಕು. ಹೋಗಲು ಪ್ರಯತ್ನಿಸಬೇಕು.

ಪ್ರತಿಯೊಬ್ಬ ವ್ಯಕ್ತಿಯೂ ಅತ್ಯಲ್ಪ ಕೆಲಸ ಮಾಡಬಹುದಾದರೂ ಒಟ್ಟಿನಲ್ಲಿ ಆ ಶಕ್ತಿಯು ಬೆಳೆದುಬರುವುದು. ನಮ್ಮಲ್ಲಿ ಉದಾತ್ತ ತತ್ವಗಳಿಗೇನೂ ಕೊರತೆ ಇಲ್ಲ. ಆದರೆ ಆಚರಣೆಯಲ್ಲಿ ತರಲು ಶುದ್ಧ ಸೋಮಾರಿಗಳಾಗಿದ್ದೇವೆಂದು ಹೇಳಿದರೆ ತಪ್ಪಾಗಲಾರದು.

ಆಚರಣೆಯಲ್ಲಿ ಯಾರು ತರಬೇಕು ಮತ್ತು ಹೇಗೆ ತರಬೇಕೆಂಬ ಪ್ರಶ್ನೆಗಳು ಉದ್ಭವಿಸುವುವು. ಇದಕ್ಕೆ ಇಷ್ಟೇ ಹೇಳಬಹುದು. ಒಬ್ಬನು ಹಿಂದು ತತ್ವವನ್ನು ಆಚರಿಸಿದರೆ ಅದರಿಂದ ಅವನೂ ಪ್ರಯೋಜನ ಹೊಂದುವುದಲ್ಲದೆ, ಪರರೂ ಅದರಂತೆ ನಡೆಯಲು ಬಹಳ ಸಹಾಯವಾಗುವುದು. ಮಾತಿನಂತೆ ಕಾರ್ಯ ನಡೆಯದಿರುವುದೇ ನಮ್ಮ ದುಸ್ಥಿತಿಗೆ ಕಾರಣವಾಗಿದೆ.

ಇದಕ್ಕೆ ಒಂದೇ ಉದಾಹರಣೆ ಕೊಡುತ್ತೇನೆ. ಪುಸ್ತಕವನ್ನು ಸ್ನೇಹಿತನಿಂದಲೋ, ಲೈಬ್ರರಿಯಿಂದಲೋ ಎರವು ತರುತ್ತೇವೆ. ಅದನ್ನು ಉಪಯೋಗಿಸಿಕೊಂಡು ನಿಯಮಿತ ವೇಳೆಗೆ ತಲುಪಿಸಿದರೆ, ಬೇರೆ ಪುಸ್ತಕವನ್ನು ತರಬಹುದು. ನಮ್ಮಲ್ಲಿ ನಂಬಿಕೆಯೂ ಉಳಿಯುವುದು ಸ್ನೇಹವೂ ಉಳಿಯುವುದು. ಆದರೆ ಈ ರೀತಿ ಮಾಡದೆ ಬಹಳ ದಿನವಾದ ಮೇಲೆ ಕೊಟ್ಟರೆ, ಆ ವಸ್ತುವನ್ನು ಹಾಳುಮಾಡಿಕೊಟ್ಟರೆ, ನಂಬಿಕೆ, ಸ್ನೇಹತನ, ವಿಶ್ವಾಸ ಮಾಯವಾಗಿ, ಅಪನಂಬಿಕೆ, ತಾತ್ಸಾರ ಮುಂತಾದುವುಗಳು ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ಇಂತಹ ಸಣ್ಣ ಸಣ್ಣ ವಿಷಯಗಳೇ ನಮ್ಮ ಪ್ರಗತಿಗೆ ಅಡ್ಡವಾಗಿ ನಿಂತಿವೆ

ನಮ್ಮಲ್ಲಿ ಪರಮತ ಸಹನೆ, ವಿಚಾರಶೀಲತೆ ಕಾರ್ಯತತ್ಪರತೆ, ಸ್ಥೈರ್ಯ ಧೈರ್ಯಗಳು ಬೆಳೆದು ಬರಬೇಕು. ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡರೆ ಬೇಕಲ್ಲದೆ, ದುರ್ಗುಣಗಳನ್ನು ತ್ಯಜಿಸಬೇಕು. ಇದಕ್ಕೆ ಅಭ್ಯಾಸಬೇಕು.

ಒಂದು ಯೋಚನೆಯಿಂದ ಹಿಂದು ಕೆಲಸವೂ, ಒಂದು ಕೆಲಸದಿಂದ ಒಂದು ಅಭ್ಯಾಸವು, ಒಂದು ಅಭ್ಯಾಸದಿಂದ ಹಿಂದು ಗುಣವೂ, ಒಂದು ಗುಣದಿಂದ ಒಂದು ಜೀವನವೇ ನೂರಾರ್ ಟಾಗುವುದೆಂದು ಹೇಳುತ್ತಾರೆ ಆದ್ದರಿಂದ ಪ್ರತಿಯೊಂದು ಯೋಚನೆಯಿಂದ ಬಹಳ ಜಾಗರೂಕತೆಯಿಂದ ತಿಳಿದುಕೊಂಡು ಆಚರಿಸುವುದೇ ಸೂಕ್ತವಲ್ಲವೇ

ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುವ ಸ್ವಭಾವ ನಮ್ಮಲ್ಲಿ ನ್ಯಾಯವಾಗಿ ಬೆಟ್ಟಿದೆ. ಪರರ ತಪ್ಪು ಕಾಣುವ ಕೆಟ್ಟ ಗುಣವು ಬಂದಿದೆ. ಇದರಲ್ಲಿ ಯಾವ ಒಳ್ಳೆ ಕಾರ್ಯವಾಗದಿದ್ದರೂ ಹಾನಿ ಮಾತ್ರ ತಪ್ಪದೇ ಆಗುವುದರಲ್ಲಿ ಸಂಶಯವೇ ಇಲ್ಲ ಇದರಿಂದಲೇ ತಪ್ಪು ಮಾಡುವುದು ಮಾನವನ ಸ್ವಭಾವ, ಅದರೆ ಕ್ಷಮಿಸುವುದು ದೈವತ್ವ ಸ್ವಭಾವ ಎಂದು ಹೇಳುತ್ತಾರೆ. ತನ್ನಲ್ಲಿಯ ತಪ್ಪು ಕಂಡುಕೊಳ್ಳುವುದನ್ನು, ಪರರಲ್ಲಿ ಸದ್ಗುಣ ಕಾಣುವ ಅಭ್ಯಾಸವನ್ನು ನಾವು ಮೊದಲು ಕಲಿಯಬೇಕು

ಎಲ್ಲಿಯವರೆಗೆ ನಾವು ಭಾಷಣ ಮಾಡುತ್ತಿರುವೆವೋ, ಮಾತಿನಲ್ಲೇ ನಮ್ಮ ಶಕ್ತಿಯನ್ನು ವ್ಯಯ ಮಾಡುತ್ತೇವೆಯೋ, ಅಲ್ಲಿಯವರೆಗೆ ಪ್ರಗತಿಯನ್ನು ಹೊಂದುವುದು ಅಸಂಭವ ಸಂಘಗಳನ್ನೂ, ಚರ್ಚಾಕೂಟಗಳನ್ನೂ, ಅಧಿವೇಶನಗಳನ್ನೂ ಮಾಡಿದರೆ ಸಾಲದು; ಆಡಿದ, ಆಡುವ ಅನೇಕ ವಿಷಯಗಳಲ್ಲಿ ಒಂದೆರಡನ್ನಾದರೂ ಕಾರ್ಯರೂಪಕ್ಕೆ ತಂದರೆ, ಅದರಿಂದ ಅನೇಕ ಉತ್ತಮ ಸಂಸ್ಥಾನಗಳು ಉಂಟಾಗಬಲ್ಲದು. ಆಡಿದಂತೆ ಮಾಡಬೇಕು ಎಂಬುದು ನಮ್ಮೆಲ್ಲರ ಧ್ಯೇಯವಾಗಬೇಕಾಗಿದೆ. ಆಡಿದಂತೆ ಮಾಡದಿದ್ದರೆ ಇತರರಿಗೆ ನಂಬಿಕೆ ಬರುವುದಾದರೂ ಹೇಗೆ ? ನಮ್ಮಲ್ಲಿ ಬುದ್ಧಿಶಕ್ತಿಯಾಗಲೀ, ಸಾಹಸವಾಗಲೀ, ಉತ್ತಮ ಉದಾತ್ತ ಧ್ಯೇಯಗಳಾಗಲೀ ಯಾವುದಕ್ಕೂ ಕೊರತೆಯಿಲ್ಲ. ಆದರೆ ಕಾರ್ಯಚಾತುರ್ಯ ಇಲ್ಲದಿರುವುದರಿಂದ, ಆ ಎಲ್ಲ ವಿಷಯಗಳೂ ಅನುಪಯುಕ್ತವಾಗಿವೆ.

ನಾಸಿಕ್ ಕಾಂಗ್ರೆಸ್ಸಿನಲ್ಲಿ ಟೀ ಪಾನಕ

ನಾಸಿಕ್ ಕಾಂಗ್ರೆಸ್ಸಿನಲ್ಲಿ ಅಖಿಲ ಭಾರತ ಸಭ್ಯರಿಗೆ ಕೊಡಲ್ಪಟ್ಟ ಟೀ ನೀರಿನಲ್ಲಿ ಸಕ್ಕರೆಯು ಹೆಚ್ಚಾಗಿ ಪಾನಕದಂತಿರಲು ಪ್ರಧಾನಿ ನೆಹ್ರೂರವರು ತಮಾಷೆಯಾಗಿ ' ಸಕ್ಕರೆ ಸರಬರಾಜು ಸರಿಯಾಗಿಲ್ಲೆಂದು ಆಕ್ಷೇಪಿಸಲು ಸಾಧ್ಯವಿಲ್ಲದಷ್ಟು ಸಿಹಿಯಾಗಿ ಈ ಟೀ ಇದೆ ' ಎಂದಂದರೆಂತೆ. ಟೀಯಲ್ಲಿ ಸಕ್ಕರೆಯು ಸಾಕಾದಷ್ಟು ಮಾತ್ರವಿದ್ದು ಅದರ ಕಹಿಯೂ ಇರುವಾಗಲೇ ಅದು ಅಪ್ಯಾಯಮಾನವಾಗಿರುವಿಕೆ. ಅದರೆ ನಾಸಿಕ್ ಮಹಾರಾಷ್ಟ್ರದ ಮಧ್ಯ ಪ್ರಾಂತ್ಯ. ಮಹಾರಾಷ್ಟ್ರರು ಸಿಹಿಯನ್ನು ಹೆಚ್ಚಾಗಿ ಉಪಯೋಗಿಸುವಂಥವರು. ಮಹಾರಾಷ್ಟ್ರದ ಸಕ್ಕರೆಯು ಮೇಲಿನ ಪ್ರೀತಿಯು ಟೀಯು ರುಚಿಯನ್ನು ಕೆಡಿಸಿತು ಸಕ್ಕರೆಯನ್ನು ಹೆಚ್ಚು ತಿನ್ನುವವರು ಸಕ್ಕರೆಯು ಸರಬರಾಜು ಸಾಕಾದಷ್ಟು ಇಲ್ಲವೆಂದು ಕೂಗಾಡುವದು ಸಹಜವೇ. ಮಹಾರಾಷ್ಟ್ರಕ್ಕೆ ಸಕ್ಕರೆಯು ಸರಬರಾಜು ಆಯುವುದು ಯು ಪಿ ಮತ್ತು ಬಿಹಾರುಗಳಿಂದ. ರಿಪಬ್ಲಿಕ್ ಅಧ್ಯಕ್ಷನು ಬಿಹಾರು ನಾಯಕನು; ಕಾಂಗ್ರೆಸ್ಸು ಅಧ್ಯಕ್ಷನು ಯು ಪಿ ನಿವಾಸಿ; ಪ್ರಧಾನಿಯೂ ಯು ಪಿ ಸ್ಥಳಿದವನೇ- ಮಹಾರಾಷ್ಟ್ರರು ಆಂದೋಳನೆಗೆ ಹೆಸರು ಹೊಂದಿದವರಾದುದರಿಂದ ಶ್ರೀ ನೆಹ್ರೂರವರು ಈ ಬಗೆಯಲ್ಲಿ ತಮಾಷೆಯಾಗಿ ನುಡಿದರು.

(ತ್ರಿ)

ಚಲನಚಿತ್ರದಲ್ಲಿ ೮೦ ವರ್ಷದ ಮುದುಕಿ

ತನ 80 ವರ್ಷ ಪ್ರಾಯದಲ್ಲಿ ಎಡೆಲೀ ರೋನಾಲ್ಡ್ಸ್ ಎಂಬಾಕೆ ಕಾಲೇಜಿಗೆ ಸೇರಿ ಡಿಗ್ರಿ ಪಡೆದಳು ; ಇದೀಗ ಅವಳಿಗೆ 84 ವರ್ಷ ಪ್ರಾಯ. ಕಿಪ್ಲಿಂಗರ ಪ್ರಸಿದ್ಧ ಕಾದಂಬರಿ ' ದನು' ' ಚಿತ್ರದಲ್ಲಿ ಅವಳಿಗೊಂದು ಪಾತ್ರ ಕೊಟ್ಟಿರುವರು.



ಇಂಡಿಯಾವನ್ನು ಅಳುತ್ತಿರುವವರು ಯಾರು ?

ಪಟೇಲೋ ? ಬಿರ್ಲಾನೋ ?

(ಅಮೇರಿಕ ವಾರಸೋರ್ವನ ಸಂದೇಹ)

ಸರ್ದಾರ್ ಪಟೇಲ್, ಸರ್ ಘನಶ್ಯಾಂ ದಾಸ್ ಬಿರ್ಲಾರವರು ಹಾಜರಾಗಿದ್ದ ಒಂದು ಸಂತೋಷ ಕೂಟಕ್ಕೆ ಆಹ್ವಾನಿಸಲ್ಪಟ್ಟಿದ್ದ ಒಬ್ಬ ಅಮೇರಿಕ ವಾರಸಿಗೆ ಧರ್ಮ ಸಂದೇಹವೊಂದುಂಟಾಯಿತು ಅದು ಯಾವುದೆಂದರೆ ಇಂಡಿಯಾವನ್ನು ಅಳುತ್ತಿರುವವರು ಯಾರು ? ಪಟೇಲರೋ ? ಬಿರ್ಲಾರೋ ? ಎಂಬುವುದು.

ಅಮೆರಿಕದಿಂದ ಹೊರಡುವ 'ದಿ ರಿವೋರ್ಟರ್' ಎಂಬ ಒಂದು ಪಕ್ಷ ಪತ್ರಿಕೆಯಲ್ಲಿ (18-7-50) ಫಿಲಿಪ್ ಟಾಬ್ಬಾಟ್ ಎಂಬಾತನು 'ಇಬ್ಬರ ಮೇಲೆ ಎವ ಭಾರ' ಎಂಬ ಲೇಖನದಲ್ಲಿ ಈ ಬಯಲ್ಲಿ ಬರೆದಿದ್ದಾನೆ —

ಪಶ್ಚಾತ್ತಾಪ ಸ್ವಭಾವವಿಲ್ಲದ ದಕ್ಷಿಣ ಪಕ್ಷವಾದಿಯು ಪಟೇಲ್, ಬಂಡವಾಳಗಾರರಿಗೆ ಸ್ನೇಹಿತನೂ ಕೂಡ ಆತನಾಗಿದ್ದಾನೆ. ಒಂದು ಬಾರಿ ಅಮೇರಿಕಾ ರಾಜನೀತಿಜ್ಞನೊಬ್ಬಾತನು ಪಟೇಲರಿಗೆ ಸಂತೋಷಕೂಟಕ್ಕೆ ಆಹ್ವಾನವನ್ನಿತ್ತನು. ಅಲ್ಲಿ ಕೋಟೀಶ್ವರನಾದ ಘನಶ್ಯಾಂದಾಸ್ ಬಿರ್ಲಾ ಕೂಡಾ ಇದ್ದನು. ಆತನು, ಅಮೇರಿಕಾ ಸಂಯುಕ್ತ ರಾಷ್ಟ್ರಗಳೊಂದಿಗೆ ಇಂಡಿಯಾ ಆರ್ಥಿಕ ಸಂಬಂಧಗಳನ್ನು ಏರ್ಪಾಟು ಮಾಡಿಕೊಳ್ಳುವ ವಿಷಯದಲ್ಲಿ ಮಾತುಕತೆ ನಡಿಸಲು ಹೆಚ್ಚು ಕುತೂಹಲವುಳ್ಳವನಾಗಿರುವಂತೆ ಕಂಡು ಬಂದನು. ಆ ಅಮೇರಿಕ ಶರುವಾಯ ಹೀಗೆ ತಿಳಿಸಿದನಂತೆ — ಸರ್ಕಾರದ ಪರವಾಗಿ ವಾತನಾಡುತ್ತಿರುವಂಥವನು ಪಟೇಲೋ ಬಿರ್ಲಾನೋ. ನನಿಗೆ ಬೋಧೆಯಾಗ್ಲಿಲ್ಲವೆಂದು. ((ಜಾಲ್ವ))

ಭಾರತ ಪ್ರಧಾನಿ ಪಂ|| ನೆಹರು ಜುನಾಗಢ ಪ್ರದೇಶ ವಿಂಗಡನಾ ಸಮಿತಿಗೆ ಮಾಡಿಕೊಂಡಿರುವ ಮನವಿಯಲ್ಲಿ ಮಹಾ ಜುನಾಗಢ ಮುಂದಿನ ವರ್ಷ ಫಿಬ್ರವರಿಯಲ್ಲಿ ನಡೆಯುವುದವಶ್ಯ. ಆದರ ಜುಗ್ಗೆ ತೀವ್ರ ಗಮನ ಕೈಗೊಳ್ಳಿರಿ ಎಂದು ತಿಳಿಸಿರುವುದಾಗಿ ಲಕೊ ವಾರ್ತೆ.

ಸುದ್ದಿಗಳು

ಚುನಾವಣೆ ನಡೆದ ನಂತರ ಕೊರಿಯಾಕ್ಕೆ ವಿಶ್ವಸಂಸ್ಥೆಯಲ್ಲಿ ಸದಸ್ಯತ್ವ ಕೊಡಬೇಕೆಂದು ನಿರ್ಧರಿಸಲಾಗಿದೆ.

ಪಾಕೀಸ್ತಾನ ಪ್ರಧಾನಿ ಲಿಯಾಕತ್ ಅಲಿ ಖಾರವರು ನಿನ್ನೆ ಪಾಕ್ ಪಾರ್ಲಿಮೆಂಟ್‌ನಲ್ಲಿ ಹೊರಡಿಸಿದ ಹೇಳಿಕೆಯಲ್ಲಿ ಇಡೀ ಏಷ್ಯ ಶಾಂತಿ ಕಾಶ್ಮೀರ ಸಮಸ್ಯೆಯಿಂದ ಅಲ್ಲೋಲಕಲ್ಲೋಲವಾಗಿದೆ; ಇದರಿಂದಲೇ ಭಾರತ-ಪಾಕ್ ಸ್ನೇಹಕ್ಕೇ ಧಕ್ಕೆ ತಗಲಿದೆ ಎಂದರು

ಅದಷ್ಟು ಬೇಗ ರಾಜ್ಯಭಾರದ ಹೊಣೆಯನ್ನು ಹೈದರಾಬಾದಿನ ಪ್ರಜೆಗಳಿಗೆ ವಹಿಸುವುದೇ ಭಾರತ ಸರ್ಕಾರದ ಇಚ್ಛೆ ಎಂದು ನಿನ್ನೆ ಹೈದರಾಬಾದಿನಲ್ಲಿ ಭಾಷಣ ಮಾಡುತ್ತಾ ಸರ್ದಾರ್ ಪಟೇಲರು ತಿಳಿಸಿದ್ದಾರೆ.

ಪೂರ್ವ ಬಂಗಾಳದಲ್ಲಿ 88 ಕೋಟಿ ರೂ ಬೆಲೆಯ ಸ್ವತ್ತನ್ನು ನಿರಾಶ್ರಿತರು ಸ್ವಾಧೀನಪಡಿಸಿಕೊಂಡಿರುವರೆಂದು ಕಲ್ಕತ್ತಾ ವಾರ್ತೆ

ಮೊನ್ನೆ ಗ್ರೇವಾಖಿಂಟ್ ಬ್ರೂಕ್ಲಿಕ್ ಪ್ರದೇಶದಲ್ಲಿ ಅದ ನಾಲ್ಕು ಸಿಡಿತದಿಂದ ಅಲ್ಲಿ ಮಹಿಳೆಯರು ಗಾಭರಿ ಬಿದ್ದು ಅಣು ಬಾಂಬು ಬೆತ್ತೆಂದು ಮಹಿಳೆಯರು ತೀವ್ರ ಗಾಭರಿ ಬಿದ್ದರೆಂದು ನ್ಯೂಯಾರ್ಕ್ ವಾರ್ತೆ

ಜನರಲ್ ಮೆಕ್‌ಆರ್ಥರರು ವಿಶ್ವಸಂಸ್ಥೆಯ ಸ್ವಿಟ್ಜ ಪೂಜನೆಗಾಗಿ ಕೊರಿಯದಲ್ಲಿ 38 ದ್ವಂದ್ವ ದಾಟದೆ ಇರುವುದಾಗಿ ಟೋಕಿಯೋ ವಾರ್ತೆ.

ಪಾಟ್ನಾ : ಗಯಾದಲ್ಲಿ ಮೊನ್ನೆ ದಿನ ಶ್ರೀಮಂತ ಬಟ್ಟೆ ವ್ಯಾಪಾರಿಗಳೀರ್ವರನ್ನು ಅಗತ್ಯ ಸರಬರಾಜು ಶಾಸನ ರೀತ್ಯ ಬಂಧಿಸಿ, ಕೈಗೆ ಕೋಳ ತೊಡಿಸಿ ಪಾದರಕ್ಷೆ ಇಲ್ಲದೆ ನ್ಯಾಯಾಸ್ಥಾನಕ್ಕೆ ನಡೆಸಿಕೊಂಡು ಹೋದರಾಯಿತು ರಸ್ತೆಯ ಇಕ್ಕೆಡೆಗಳಲ್ಲೂ ಹಿಂದು ಮಹಾಸಭಾರು ಇ ನ ಈ ನೋಟವನ್ನು ನೋಡಿದರು.

ಕರಾಚಿ : ಪಾಕಿಸ್ತಾನದ ಸಂರಕ್ಷಣಾ ಶಾಖೆ ಹೊರಡಿಸಿದ ಪ್ರಕಟಣೆಯಲ್ಲಿ ಬೆಲೂಚಿಸ್ತಾನಕ್ಕೆ ನುಗ್ಗಿ ಬಂದಿದ್ದ ಅಫಘನ ಸೇನೆಯನ್ನು ಹಿಂದಕ್ಕೋಡಿಸಲಾಯಿತೆಂದು ತಿಳಿಸುತ್ತದೆ

ಗೋ ರ ಕ್ಷ ಣ

ವಿನಂತಿ : ಪ್ರತಿ ಪೂರ್ಣಿಮೆ ಪ್ರಕಟವಾಗುವ 'ಗೋರಕ್ಷಣ' ಕ್ಕೆ ಗೋವು, ಪ್ರಾಣಿದಯೆ, ಸಸ್ಯಾಹಾರ ಇವುಗಳನ್ನು ಕುರಿತಾದ ಲೇಖನ ಹಾಗೂ ವರ್ತಮಾನಗಳಿಗೆ ಸ್ವಾಗತವುಂಟು ಪತ್ರಿಕೆಯ ಹೆಚ್ಚು ಪ್ರಚಾರಕ್ಕೆ ಸಹಕಾರವನ್ನೂ ಮತ್ತು ಎಲ್ಲಾ ವಿಧವಾದ ಪ್ರೋತ್ಸಾಹಗಳನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗುವುದು ವಿಳಾಸ: ಸತ್ಯವಾದಿ ಆಫೀಸ್, ಮೈಸೂರು.

ಗೋ ರಕ್ಷಣ ಮೂರನೆ ಸಂಚಿಕೆ ಇದೇ 26 ನೇ ತಾ|| ಪ್ರಕಟಣೆ

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಸಮಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್